ಲಾರಿ ಮೇಲೆ ಹಾಕಿ ಕಳುಹಿಸಬೇಕಾದರೂ ಶೀತಲ ವ್ಯವಸ್ಥೆಯ ಸೌಲಭ್ಯದ ಒಳಗೇ ಲಾರಿ ಮೇಲೆ ಹಾಕಿ ಕಳುಹಿಸಬೇಕಾಗುತ್ತದೆ. ಇದನ್ನು ಒಂದು ದಿವಸ ತಡಮಾಡಿದರೂ ಸಹ ಹಾಳಾಗುವ ಸಂದರ್ಭ ಬರುತ್ತದೆ. ಏತಕ್ಕೆಂದರೆ ಹಣ್ಣುಗಳು ಅವೆಲ್ಲಾ ಪೆರಿಷಬೆಲ್ ಐಟಮ್ಸ್. ಈ ದೃಷ್ಟಿಯಿಂದ ಈ ಹಣ್ಣವನ್ನು ರಾಜ್ಯಮಟ್ಟದಲ್ಲಿ ತಂದು ಇದನ್ನು ಮಾಡಬೇಕೆಂದು ಏನು ಜಿಲ್ಲಾ ಪರಿಷತ್‌ನವರು ಸಭೆ ಮಾಡಿ ಕಳುಹಿಸಿಕೊಟ್ಟಿದ್ದಾರೆ. It is under serious consideration of the Government ಈ ಹಣ ಯಾವಾಗ ಕಳುಹಿಸಿದ್ದಾರೆ, ಬಿಟ್ಟಿದ್ದಾರೆ ಎಂಬ ವಿವರವನ್ನು ನಾನಂ ಆ ನಂತರ ಕೊಡುತ್ತೇನೆ.

ಶ್ರೀ ಬಿ. ಎಸ್. ಪಾಟೀಲ್.—ಮಾನ್ಯ ಮಂತ್ರಿಗಳು ಬಿಜಾಪುರದಲ್ಲಿ ಮಣ್ಣು ಪರೀಕ್ಷಾ ಘಟಕವನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದಾರೆ, ಬಹಳ ಸಂತೋಷ. ಎರಡು ವರ್ಷಗಳ ಹಿಂದೆ ಮಣ್ಣು ಪರೀಕ್ಷೆ ಮಾಡುವ ಕೇಂದ್ರ ಬಿಜಾಪುರದಲ್ಲಿತ್ತು. ಅದನ್ನು ತೆಗೆದು ಜಮಖಂಡಿಗೆ ಶಿಫ್ಟ್ ಮಾಡಿರುತ್ತಾರೆ. ಜಿಲ್ಲಾ ಕೇಂದ್ರದಲ್ಲಿದ್ದ ಇದನ್ನು ತಾಲ್ಲೂಕು ಕೇಂದ್ರಕ್ಕೆ ಬಯ್ಯುವುದು ಇದು ಮೊದಲನೇ ಸಲ ನಾನು ನೋಡಿದ್ದು. ನಾನು ಬೇರೆಲ್ಲೂ ಇದನ್ನು ನೋಡಿಲ್ಲ. ಮಾನ್ಯ ಮಂತ್ರಿಗಳನ್ನು ಅದನ್ನು ಮಾಡುತ್ತೇವೆಂದು ಹೇಳಿದ್ದಾರೆ, ಬಹಳ ಸಂತೋಷ. ಆದರ ಜೊತೆಗೆ ಮಾನ್ಯ ಮಂತ್ರಿಗಳು ಹೇಳಿದ ಹಾಗೆ, ನಿಂಬೆ ಹಣ್ಣನ್ನು ನಮ್ಮ ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಾರೆ. ಒಂದೊಂದು ಸಲ ನಿಂಬೆಗೆ ಸರಿಯಾದ ಧಾರಣೆ ಇಲ್ಲವೆಂದು ಬೆಳೆದುದನ್ನು ತಿಪ್ಪೆಗೆ ಹಾಕುವ ಪ್ರಸಂಗ ಬರುತ್ತಿದೆ. ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದರ ಬಗ್ಗೆ ಒಂದು ಪ್ರೊಸೆಸಿಂಗ್ ಯೂನಿಟ್ ಮಾಡಿ, ರಸ ತೆಗೆಯುವಂತಹದ್ದಾಗಲೀ, ಪೌಡರ್ ಮಾಡುವಂತಹ ಯೂನಿಟ್‌ನ್ನಾಗಲೀ ಸ್ಥಾಪನೆ ಮಾಡಿದರೆ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಈ ದಿಸೆಯಲ್ಲಿ ಸರಕಾರ ಏನಾದರೂ ವಿಚಾರ ಮಾಡಿದೆಯೇ ಎಂಬುದನ್ನು ತಿಳಿಸಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ನಾನು ತತಕ್ಷಣ ಉತ್ತರ ಕೊಡುವುದಕ್ಕೆ ಬರುವುದಿಲ್ಲ. ಜಿಲ್ಲಾ ಪರಿಷತ್ತಿನವರು ಇದನ್ನು ಸ್ಟೇಟ್ ಸೆಕ್ಟಾರ್‌ನಲ್ಲಿ ತೆಗೆದುಕೊಳ್ಳಬೇಕೆಂದು ಮತ್ತು ಇದಕ್ಕೆ ಹಣ ಜಾಸ್ತಿ ಬೇಕಾಗುತ್ತದೆ ಎನ್ನುವ ಅಭಿಪ್ರಾಯವನ್ನು ಇಟ್ಟಿದ್ದಾರೆ. ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಒಪ್ಪಿಕೆ ಇಳ್ಳುತ್ತೇನೆ. ರೈತ ಬೆಳೆ ಬೆಳೆಯುತ್ತಾನೆ. ಆ ಬೆಳೆಯನ್ನು ಸಂರಕ್ಷಣೆ ಮಾಡಿ ಅವನಿಗೆ ಮಾರ್ಕೆಟಿಂಗ್ ಫೆಸಿಲಿಟಿ ಮಾಡಿ ಕೊಡದಿದ್ದರೆ ಹೇಗೆ? ಮಾರ್ಕೆಟಿಂಗ್ ವ್ಯವಸ್ಥೆ ಇಲ್ಲದಿದ್ದರೆ ಅವನು ಶೋಷಣೆಗೆ ಒಳಪಡುತ್ತಾನೆ. ರೈತನು ಬೆಳೆ ಬೆಳೆಯಲು ಸಹಾಯ ಮಾಡುತ್ತೇವೆ. ನಾವು ಅದರ ಜೊತೆ ಜೊತೆಯಲ್ಲಿಯೇ ಮಾರ್ಕೆಟಿಂಗ್ ವ್ಯವಸ್ಥೆ ಸಹ ಮಾಡಿಕೊಡಬೇಕಾಗುತ್ತದೆ. ಇಲ್ಲದಿದ್ದರೆ ನಮ್ಮ ಟೋಟಲ್ ಪ್ರೊಡಕ್ಷನ್‌ಗೆ ಪೆಟ್ಟು ಬೀಳುತ್ತದೆ. ಅದಕ್ಕೆ ನಾವು ಈ ಬಗ್ಗೆ ಒಂದು ಚರ್ಚೆ ಮಾಡಬೇಕಾಗುತ್ತದೆ. ಇದನ್ನು ನಮ್ಮ ಒಂದೇ ಇಲಾಖೆ ಮಾಡುವಂತೆ ಇಲ್ಲ. ಇಂಡಸ್ಟ್ರೀಸ್ ಇಲಾಖೆಯವರು ಮತ್ತು ಜಿಲ್ಲಾ ಪರಿಷತ್ತಿನವರು ಮತ್ತು ಸರ್ಕಾರ ಹಾಗೂ ಸಂಬಂಧಪಟ್ಟ ಇಲಾಖೆಯವರಂ ಚರ್ಚೆ ಮಾಡಬೇಕಾಗುತ್ತದೆ. ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಚರ್ಚೆ ಮಾಡುತ್ತೇವೆ.

ಶಿಕ್ಷಕರಂಗಳ ನೇಮಕಾತಿಯಂ ಕುರಿತು

೯೨೨ ಶ್ರೀ ಕೆ ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನ ಜಿಲ್ಲಾ ಪರಿಷತ್ ವತಿಯಿಂದ ಕಳೆದ ಒಂದು ವರ್ಷದಿಂದ ಆಯ್ಕೆ ಮಾಡಲಾದ ಉಪಾಧ್ಯಾಯರುಗಳ ಸಂಖ್ಯೆ ಎಷ್ಟು ?

ಆ) ಆ ಪೈಕಿ ಎಷ್ಟು ಜನ ಉಪಾಧ್ಯಾಯರುಗಳಿಗೆ ನೇಮಕಾತಿ ಆದೇಶ ಕೊಟ್ಟಿದ್ದಾರೆ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು)—

ಅ) ೧೦೦೩

ಆ) ೩೮೪

ಶ್ರೀ ಕೆ. ಹೆಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ, ಆಪರೇಷನ್ ಬ್ಲಾಕ್ ಬೋರ್ಡ್ ಸ್ಕೀಮ್‌ನಲ್ಲಿ ೧೧೦೦ ಜನ ಉಪಾಧ್ಯಾಯರನ್ನು ಹಾಸನ ಜಿಲ್ಲಾ ಪರಿಷತ್ತಿನವರು ಸೆಲೆಕ್ಟ್ ಮಾಡಿದ್ದಾರೆ. ಆದರಲ್ಲಿ ೩೮೩ ಜನರು ಮಾತ್ರ ಅಪಾಯಿಂಟ್ ಆಗಿದ್ದಾರೆ ಉಳಿದವರು ಅಪಾಯಿಂಟ್ ಆಗಿಲ್ಲ ಎಂದು ಗೊತ್ತಾಗಿದೆ. ಉಳಿದವರನ್ನು ಯಾವಾಗ ಅಪಾಯಿಂಟ್ ಮಾಡಿಕೊಳ್ಳುತ್ತೀರಿ ?

ಶ್ರೀ ಕೆ. ಪೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಹಿರಿಯ ಜನರಿಗೆ ಮಾತ್ರ ನೇಮಕಾತಿ ಆಗಿದೆ. ಈ ಕಾರ್ಯಕ್ರಮ ಜಾರಿಗೆ ಬಂದಾಗ ಆ ಯೋಜನೆ ಅಡಿಯಲ್ಲಿ ಎಷ್ಟು ಹುದ್ದೆಗಳು ಇರುತ್ತವೆಯೋ ಅಷ್ಟು ಹುದ್ದೆಗಳನ್ನು ಮಾತ್ರ ನೇಮಕ ಮಾಡಲಾಗಿದೆ. ಯೋಜನೇತರ ಅಡಿಯಲ್ಲಿ ಬರುವಂತಹ ಹುದ್ದೆಗಳನ್ನು ಖಾಲಿ ಇಡಬೇಕೆಂದು ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ಆಜ್ಞೆ ಇತ್ತು. ಈ ಒಂದು ನೇಮಕಾತಿಯಲ್ಲಿ ಹಿರಿಯ ಜನರನ್ನು ಮಾತ್ರ ನೇಮಕ ಮಾಡಲಾಗಿದೆ, ಬಾಕಿ ಉಳಿದವರನ್ನು ಹಾಗೆ ಇಡಲಾಗಿದೆ. ಈಗ ಸರ್ಕಾರ ಯೋಜನೇತರ ಅಡಿಯಲ್ಲಿ ಬರತಕ್ಕಂಥ ಹುದ್ದೆಗಳನ್ನು ಹಾಗೆ ಖಾಲಿ ಇಡಬೇಕಾದ್ದಿಲ್ಲ ಎಂದು ತೀರ್ಮಾನ ತೆಗೆದುಕೊಂಡಿದೆ. ಮತ್ತು ಆ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ವಿಚಾರ ಮಾಡಿರುವುದರಿಂದ ಅತಿ ಶೀಘ್ರದಲ್ಲಿ ಆ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ ಹೆಚ್. ಹನುಮೇಗೌಡ.—ಆಪರೇಶನ್ ಬ್ಲಾಕ್ ಬೋರ್ಡ್ ಸ್ಕೀಮ್‌ನಲ್ಲಿ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಂಡಿದ್ದೀರಿ. ಈಗ ಜನರಲ್ಲಾಗಿ ಸಾವಿರಾರು ವೇಕೆನ್ಸಿಗಳು ಇವೆ. ಆ ರೀತಿ ಜನರಲ್ ಆಗಿ ಇರತಕ್ಕ ವೇಕೆನ್ಸಿ ಜಾಗಗಳಿಗೆ ಈ ಉಪಾಧ್ಯಾಯರನ್ನು ತುಂಬಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಪೆಚ್. ರಂಗನಾಥ್.—ಹಿಂದೆ ಮಿತವ್ಯಯದ ಆದೇಶ ಇತ್ತು. ಅದನ್ನು ಸರ್ಕಾರ ಈಗ ಸಡಿಲ ಮಾಡಿದೆ. ಆದುದರಿಂದ ಈಗ ಅವರಿಗೆ ನೇಮಕಾತಿ ಆಜ್ಞೆ ಕೊಡುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಈ ನೇಮಕಾತಿ ಸಮಿತಿಯಲ್ಲಿ ಮೂರು ಜನ ಅಧಿಕಾರಿಗಳು ಇದ್ದರು. ಈ ನೇಮಕಾತಿ ಸಮಿತಿಯವರ ಮೇಲೆ ಅನೇಕ ವಿಧವಾದ ಭ್ರಷ್ಟಾಚಾರ ಆಪಾದನೆಗಳು ಬಂತು. ಆದರಲ್ಲಿ ನಾನ್ ಆಫೀಷಿಯಲ್ ಮೆಂಬರ್ಸ್ ಯಾರೂ ಇರಲಿಲ್ಲ. ಅದು ಪತ್ರಿಕೆಗಳಲ್ಲಿ ಸಹ ಬಂತು, ಸರ್ಕಾರಕ್ಕೂ ಕೂಡ ಅನೇಕ ದೂರುಗಳು ಬಂದಿವೆ ಎಂದು ನಾನು ಕೇಳಿದ್ದೇನೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? ಮುಂದೆ ಇಂತಹ ಸಮಿತಿಗಳಲ್ಲಿ ಅಧಿಕಾರೇತರ ಸದಸ್ಯರನ್ನು ಸೇರಿಸಲು ಯೋಚನೆ ಮಾಡುತ್ತೀರಾ ?

ಶ್ರೀ ಕೆ ಪೆಚ್. ರಂಗನಾಥ್.—ಮುಂದೆ ನೇಮಕಾತಿ ಸಮಿತಿಗಳನ್ನು ರಚನೆ ಮಾಡುವಾಗ ಅಧಿಕಾರೇತರ ಸದಸ್ಯರನ್ನು ಸೇರಿಸಬೇಕೆನ್ನುವ ಅಭಿಪ್ರಾಯ ಸರ್ಕಾರಕ್ಕಿದೆ. ಅದನ್ನು ಕಾರ್ಯಗತ ಮಾಡುತ್ತೇವೆ. ಆದರೆ ಮಾನ್ಯ ಸದಸ್ಯರು ಏನು ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಬೇರೆ ಪ್ರಶ್ನೆ ಹಾಕಿದರೆ ನಾನು ಉತ್ತರ ಕೊಡುತ್ತೇನೆ.

ಸಂಜನಗೂಡು ಟೌನಿಗೆ ಕುಡಿಯುವ ನೀರಿನ ಯೋಜನೆ

೯೨೩. ಶ್ರೀ ಎಂ. ಮಹದೇವ್ (ಸಂಜನಗೂಡು).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಂಜನಗೂಡು ಟೌನಿಗೆ ಹೊಸದಾಗಿ ಕುಡಿಯುವ ನೀರಿನ ಯೋಜನೆಯನ್ನು ಕಾರ್ಯಗತ ಗೊಳಿಸಲು ಅಂದಾಜು ತಯಾರಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ ಅದು, ಈಗ ಯಾವ ಹಂತದಲ್ಲಿದೆ ?

ಇ) ಈ ಯೋಜನೆ ಕಾರ್ಯ ಯಾವಾಗ ಪ್ರಾರಂಭವಾಗುವುದು ಮತ್ತು ಎಂದು ಪೂರ್ತಿಗೊಳಿಸಲಾಗುವುದು ?

ಈ) ಶ್ರೀ ಕಂಠೇಶ್ವರ ದೇವಸ್ಥಾನದ ಮುಜರಾಯಿ ಫಂಡಿನಿಂದ ಈ ಕುಡಿಯುವ ನೀರಿನ ಯೋಜನೆಗೆ ೨೫.೦೦ ಲಕ್ಷ ರೂಪಾಯಿ ಸಹಾಯಧನ ನೀಡಲು ಮುಂದೆ ಬಂದಿರುವರು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು

ಆ) ಸರ್ಕಾರದ ಪರಿಶೀಲನೆಯಲ್ಲಿದೆ

ಇ) ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯ ನಂತರ ಪ್ರಾರಂಭಿಸಿ ೧½ ವರ್ಷಗಳಲ್ಲಿ ಪೂರ್ತಿಗೊಳಿಸಲಾಗುವುದು.

ಈ) ಬಂದಿದೆ